# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

6 ಮತ್ತು 7ನೇ ಮಹಡಿ, ಮಹಾಲಕ್ಷ್ಮಿ ಚೇಂಬರ್ಸ್, 9/2, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560 001

ಅಧಿಸೂಚನೆ ಸಂಖ್ಯೆ:/ವೈ/02/17, ಬೆಂಗಳೂರು, ದಿನಾಂಕ:15.02.2018

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ) (ಐದನೇ ತಿದ್ದುಪಡಿ) ವಿನಿಯಮಗಳು, 2017.

ಪೀಠಿಕೆ

ಆಯೋಗವು, 2003ರ ವಿದ್ಯುಚ್ಛಕ್ತಿ ಅಧಿನಿಯಮದ 181ನೇ ಪರಿಚ್ಛೇದದ 3ನೇ ಉಪಪರಿಚ್ಛೇದದಡಿಯಲ್ಲಿ ಅಗತ್ಯಪಡಿಸಲಾದಂತೆ ಹಿತಾಸಕ್ತಿದಾರರಿಂದ, ಅಭಿಪ್ರಾಯಗಳು / ಅನಿಸಿಕೆಗಳನ್ನು ಸಲಹೆ-ಸೂಚನೆಗಳನ್ನು ಆಹ್ವಾನಿಸಿ, ಕವಿನಿಆ (ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಖರೀದಿ) ವಿನಿಯಮಗಳು, 2011ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ನವೀಕರಿಸಬಹುದಾದ ಮೂಲಗಳಿಂದ ವಿದ್ಯುತ್ ಖರೀದಿ) (ಐದನೇ ತಿದ್ದುಪಡಿ) ವಿನಿಯಮಗಳು 2017ರ ಕರಡನ್ನು ಪ್ರಕಟಿಸಿತ್ತು. ಆಯೋಗವು, ಈ ವಿಷಯವಾಗಿ ಸಾರ್ವಜನಿಕರ ವಿಚಾರಣೆಯನ್ನು ಸಹಾ ದಿನಾಂಕ:24.01.2018ರಂದು ನಡೆಸಿತ್ತು. ಈ ವಿಷಯವಾಗಿ ಹಿತಾಸಕ್ತಿದಾರರಿಂದ ಬಂದ ಅಭಿಪ್ರಾಯಗಳು/ ಅನಿಸಿಕೆಗಳು / ಸಲಹೆಗಳನ್ನು ಪರಿಶೀಲಿಸಿದ ನಂತರ ಆಯೋಗವು, 2003ರ ವಿದ್ಯುಚ್ಛಕ್ತಿ ಅಧಿನಿಯಮ, (2003ರ ಕೇಂದ್ರ ಅಧಿನಿಯಮ 36)ದ 86ನೇ ಪರಿಚ್ಛೇದದ (1)ನೇ ಉಪಪರಿಚ್ಛೇದದ ಖಂಡ (ಇ) ಜೊತೆಗೆ ಓದಿಕೊಳ್ಳಲಾದ 181ನೇ ಪರಿಚ್ಛೇದದ ಅಡಿ ಪ್ರದತ್ತವಾದ ಅಧಿಕಾರಗಳನ್ನು ಮತ್ತು ಈ ಪರವಾಗಿ ಪ್ರದತ್ತವಾದ ಇತರೆ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ, ಈ ಮೂಲಕ ಈ ಕೆಳಕಂಡ ವಿನಿಯಮಗಳನ್ನು ಮಾಡುತ್ತದೆ, ಎಂದರೆ.-

## ವಿನಿಯಮಗಳು:

1. ಕಿರು ಶೀರ್ಷಿಕೆ, ಅನ್ವಯತೆ ಮತ್ತು ಪ್ರಾರಂಭ.-

(i) ಈ ವಿನಿಯಮಗಳನ್ನು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ) (ಐದನೇ ತಿದ್ದುಪಡಿ) ವಿನಿಯಮಗಳು, 2017 ಎಂಬುದಾಗಿ ಕರೆಯತಕ್ಕದ್ದು.

(ii) ಈ ವಿನಿಯಮಗಳು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗತಕ್ಕದ್ದು.

(iii) ಈ ವಿನಿಯಮಗಳು 1ನೇ ಏಪ್ರಿಲ್ 2017ರಿಂದ ಜಾರಿಗೆ ಬರತಕ್ಕದ್ದು.

2. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ) ವಿನಿಯಮಗಳು, 2011ರಲ್ಲಿ ಹಾಲಿ ವಿನಿಯಮಗಳಲ್ಲಿ ಕೆಳಕಂಡ ಕೋಷ್ಟಕದ ಅಂಕಣ (1)ರಲ್ಲಿರುವ 4 (i), 4 (ii) ಮತ್ತು 4 (iii) ಖಂಡಗಳ ಬದಲಾಗಿ ಅಂಕಣ (2)ರಲ್ಲಿ ತೋರಿಸಲಾದಂತಹ ಖಂಡಗಳನ್ನು ಪ್ರತ್ಯಾಯೋಜಿಸತಕ್ಕದ್ದು:

| 1 | 2 |
| --- | --- |
| ಹಾಲಿ ವಿನಿಯಮಗಳು | ತಿದ್ದುಪಡಿಮಾಡಿದ ವಿನಿಯಮಗಳು |

## ಹಾಲಿ ವಿನಿಯಮಗಳು

4 (i) ಪ್ರತಿಯೊಬ್ಬ ವಿತರಣಾ ಪರವಾನಗಿದಾರನು (ಲೈಸೆನ್ಸ್‌ದಾರನು), ಯಾವುದೇ ಆರ್ಥಿಕ ವರ್ಷದಲ್ಲಿ, ತನ್ನ ಒಟ್ಟಾರೆ ವಿದ್ಯುತ್ ಖರೀದಿಯಲ್ಲಿ ಶೇಕಡವಾರು ರೂಪದಲ್ಲಿ ವ್ಯಕ್ತಪಡಿಸಲಾದ ಕನಿಷ್ಠ ಪ್ರಮಾಣದ ವಿದ್ಯುಚ್ಛಕ್ತಿಯನ್ನು ನವೀಕರಿಸಬಹುದಾದ ಇಂಧನ ಮೂಲಗಳಿಂದ ಈ ಕೆಳಗೆ ನಿರ್ದಿಷ್ಟ ಪಡಿಸಿದಂತೆ ಖರೀದಿಸತಕ್ಕದ್ದು.

(ಎ) ಸೌರಶಕ್ತಿಯೇತರ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ ಭಾದ್ಯತೆ (ಆರ್‌ಪಿಓ):

| ವಿತರಣಾ ಲೈಸೆನ್ಸ್‌ದಾರ | ವರ್ಷವಾರು | | | | |
| --- | --- | --- | --- | --- | --- |
| | 2015-16 | 2016-17 | 2017-18 | 2018-19 | 2019-20 ಮತ್ತು ನಂತರ |
| ಬೆಸ್ಕಾಂ | 10% | 11% | 12% | 13% | 14% |
| ಮೆಸ್ಕಾಂ | 10% | 11% | 12% | 13% | 14% |
| ಸೆಸ್ಕಾಂ | 10% | 11% | 12% | 13% | 14% |
| ಹೆಸ್ಕಾಂ | 7% | 7.5% | 8.5% | 9.5% | 10.5% |
| ಜೆಸ್ಕಾಂ | 5.0% | 5.50% | 6.0% | 7.0% | 8% |
| ಹೆಚ್‌ಆರ್‌ಇಸಿಎಸ್ | 7% | 7.5% | 8.5% | 9.5% | 10.50% |
| ಭಾವಿತ ಲೈಸೆನ್ಸ್‌ದಾರ(ರು) | ಆರ್‌ಪಿಓ ಗುರಿಯು, ವಿಶೇಷ ಆರ್ಥಿಕ ವಲಯವಿರುವ ಎಸ್ಕಾಂನ ಆರ್‌ಪಿಓ ಗುರಿಯಷ್ಟೇ ಇರತಕ್ಕದ್ದು. | | | | |

(ಬಿ) ಸೌರಶಕ್ತಿ ನವೀಕರಿಸಬಹುದಾದ ಇಂಧನ ಮೂಲದಿಂದ ವಿದ್ಯುತ್ ಖರೀದಿ ಭಾದ್ಯತೆ (ಆರ್‌ಪಿಓ):

| ವಿತರಣಾ ಲೈಸೆನ್ಸ್‌ದಾರ | ವರ್ಷವಾರು | | | | |
| --- | --- | --- | --- | --- | --- |
| | 2015-16 | 2016-17 | 2017-18 | 2018-19 | 2019-20 ಮತ್ತು ನಂತರ |
| ಬೆಸ್ಕಾಂ | 0.25% | 0.75% | 1.25% | 1.75% | 2.50% |
| ಮೆಸ್ಕಾಂ | 0.25% | 0.75% | 1.25% | 1.75% | 2.50% |
| ಸೆಸ್ಕಾಂ | 0.25% | 0.75% | 1.25% | 1.75% | 2.50% |
| ಹೆಸ್ಕಾಂ | 0.25% | 0.75% | 1.25% | 1.75% | 2.50% |
| ಜೆಸ್ಕಾಂ | 0.25% | 0.75% | 1.25% | 1.75% | 2.50% |
| ಹೆಚ್‌ಆರ್‌ಇಸಿಎಸ್ | 0.25% | 0.75% | 1.25% | 1.75% | 2.50% |
| ಭಾವಿತ ಲೈಸೆನ್ಸ್‌ದಾರ(ರು) | 0% | 0.75% | 1.25% | 1.75% | 2.50% |

ಪರಂತು, ಎಸ್ಕಾಂನಿಂದ(ಗಳಿಂದ) ಭಾಗಶ: ಅಥವಾ ಸಂಪೂರ್ಣವಾಗಿ ಸಗಟು ವಿದ್ಯುತ್ ಖರೀದಿಸುವ ಹೆಚ್‌ಆರ್‌ಇಸಿಎಸ್ ಮತ್ತು ಭಾವಿತ ಲೈಸೆನ್ಸ್‌ದಾರನು (ರು), ಅಂಥ ಎಸ್ಕಾಂ(ಗಳು) ಆರ್‌ಪಿಓ ಅನ್ನು ಪಾಲಿಸಿದ್ದಲ್ಲಿ, ಅಂಥ ಎಸ್ಕಾಂನಿಂದ(ಗಳಿಂದ) ಮಾಡುವ ವಿದ್ಯುಚ್ಛಕ್ತಿ ಖರೀದಿಯ ಮಟ್ಟಿಗೆ, ಆರ್‌ಪಿಓ ಅನ್ನು ಪಾಲಿಸಿದ್ದಾನೆಂದು ಭಾವಿಸತಕ್ಕದ್ದು. ಅಂಥ ಪ್ರಕರಣಗಳಲ್ಲಿ, ಸಂಬಂಧಪಟ್ಟ ಎಸ್ಕಾಂ(ಗಳು) ಸಂದರ್ಭಾನುಸಾರ, ಹೆಚ್‌ಆರ್‌ಇಸಿಎಸ್‌ಗೆ ಅಥವಾ ಅಂಥ ಭಾವಿತ

## ತಿದ್ದುಪಡಿಮಾಡಿದ ವಿನಿಯಮಗಳು

4 (i) ಪ್ರತಿಯೊಬ್ಬ ವಿತರಣಾ ಪರವಾನಗಿದಾರನು (ಲೈಸೆನ್ಸ್‌ದಾರನು) ಯಾವುದೇ ಆರ್ಥಿಕ ವರ್ಷದಲ್ಲಿ, ಜಲವಿದ್ಯುತ್ ಮೂಲದಿಂದ ಮಾಡುವ ವಿದ್ಯುತ್ ಖರೀದಿಯನ್ನು ಹೊರತುಪಡಿಸಿ, ತನ್ನ ಒಟ್ಟಾರೆ ವಿದ್ಯುತ್ ಖರೀದಿಯಲ್ಲಿ ಶೇಕಡವಾರು ರೂಪದಲ್ಲಿ ವ್ಯಕ್ತಪಡಿಸಲಾದ ಕನಿಷ್ಠ ಪ್ರಮಾಣದ ವಿದ್ಯುಚ್ಛಕ್ತಿಯನ್ನು ನವೀಕರಿಸಬಹುದಾದ ಇಂಧನ ಮೂಲಗಳಿಂದ ಈ ಕೆಳಗೆ ನಿರ್ದಿಷ್ಟ ಪಡಿಸಿದಂತೆ ಖರೀದಿಸತಕ್ಕದ್ದು.

(ಎ) ಸೌರಶಕ್ತಿಯೇತರ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಖರೀದಿ ಭಾದ್ಯತೆ (ಆರ್‌ಪಿಓ):

| ವಿತರಣಾ ಲೈಸೆನ್ಸ್‌ದಾರ | ವರ್ಷವಾರು | | | | |
| --- | --- | --- | --- | --- | --- |
| | 2015-16 | 2016-17 | 2017-18 | 2018-19 | 2019-20 ಮತ್ತು ನಂತರ |
| ಬೆಸ್ಕಾಂ | 10% | 11% | 12% | 13% | ಇನ್ನೂ ನಿರ್ಧರಿಸ ಬೇಕಾಗಿದೆ |
| ಮೆಸ್ಕಾಂ | 10% | 11% | 12% | 13% | |
| ಸೆಸ್ಕಾಂ | 10% | 11 % | 11% | 12% | |
| ಹೆಸ್ಕಾಂ | 7% | 7.5% | 8.5% | 9.50% | |
| ಜೆಸ್ಕಾಂ | 5.0% | 5.50% | 6.0% | 7.0% | |
| ಹೆಚ್‌ಆರ್‌ಇಸಿಎಸ್ | 7% | 7.5% | 8.5% | 9.50% | |
| ಭಾವಿತ ಲೈಸೆನ್ಸ್‌ದಾರ(ರು) | ಆರ್‌ಪಿಓ ಗುರಿಯು, ಭಾವಿತ ಲೈಸೆನ್ಸ್‌ದಾರ(ರು) ಇರುವ ಎಸ್ಕಾಂನ ಆರ್‌ಪಿಓ ಗುರಿಯಷ್ಟೇ ಇರತಕ್ಕದ್ದು. | | | | |

(ಬಿ) ಸೌರಶಕ್ತಿ ನವೀಕರಿಸಬಹುದಾದ ಇಂಧನ ಮೂಲದಿಂದ ವಿದ್ಯುತ್ ಖರೀದಿ ಭಾದ್ಯತೆ (ಆರ್‌ಪಿಓ):

| ವಿತರಣಾ ಲೈಸೆನ್ಸ್‌ದಾರ | ವರ್ಷವಾರು | | | | |
| --- | --- | --- | --- | --- | --- |
| | 2015-16 | 2016-17 | 2017-18 | 2018-19 | 2019-20 ಮತ್ತು ನಂತರ |
| ಬೆಸ್ಕಾಂ | 0.25% | 0.75% | 2.75% | 6.00% | ಇನ್ನೂ ನಿರ್ಧರಿಸ ಬೇಕಾಗಿದೆ |
| ಮೆಸ್ಕಾಂ | 0.25% | 0.75% | 2.75% | 6.00% | |
| ಸೆಸ್ಕಾಂ | 0.25% | 0.75% | 2.75% | 6.00% | |
| ಹೆಸ್ಕಾಂ | 0.25% | 0.75% | 2.75% | 6.00% | |
| ಜೆಸ್ಕಾಂ | 0.25% | 0.75% | 2.75% | 6.00% | |
| ಹೆಚ್‌ಆರ್‌ಇಸಿಎಸ್ | 0.25% | 0.75% | 2.75% | 6.00% | |
| ಭಾವಿತ ಲೈಸೆನ್ಸ್‌ದಾರ(ರು) | 0% | 0.75% | 2.75% | 6.00% | |

ಪರಂತು, ಎಸ್ಕಾಂನಿಂದ(ಗಳಿಂದ) ಭಾಗಶ: ಅಥವಾ ಸಂಪೂರ್ಣವಾಗಿ ಸಗಟು ವಿದ್ಯುತ್ ಖರೀದಿಸುವ ಹೆಚ್‌ಆರ್‌ಇಸಿಎಸ್ ಮತ್ತು ಭಾವಿತ ಲೈಸೆನ್ಸ್‌ದಾರನು (ರು), ಅಂಥ ಎಸ್ಕಾಂ(ಗಳು) ಆರ್‌ಪಿಓ ಅನ್ನು ಪಾಲಿಸಿದ್ದಲ್ಲಿ, ಅಂಥ ಎಸ್ಕಾಂನಿಂದ(ಗಳಿಂದ) ಮಾಡುವ ವಿದ್ಯುಚ್ಛಕ್ತಿ ಖರೀದಿಯ ಮಟ್ಟಿಗೆ, ಆರ್‌ಪಿಓ ಅನ್ನು ಪಾಲಿಸಿದ್ದಾನೆಂದು ಭಾವಿಸತಕ್ಕದ್ದು. ಅಂಥ ಪ್ರಕರಣಗಳಲ್ಲಿ, ಸಂಬಂಧಪಟ್ಟ ಎಸ್ಕಾಂ(ಗಳು) ಸಂದರ್ಭಾನುಸಾರ, ಹೆಚ್‌ಆರ್‌ಇಸಿಎಸ್‌ಗೆ ಅಥವಾ ಅಂಥ ಭಾವಿತ

| | |
|---|---|
| ಲೈಸೆನ್ಸ್‌ದಾರನಿಗೆ (ರಿಗೆ) ತ್ರೈಮಾಸಿಕ ಆರ್‌ಪಿಓ ಅನುಸರಣಾ ವರದಿಯ ಪ್ರತಿಯನ್ನು ಸಲ್ಲಿಸತಕ್ಕದ್ದು.<br><br>ಮತ್ತೂ ಪರಂತು, ಎಸ್ಕಾಂನಿಂದ(ಗಳಿಂದ) ಭಾಗಶ: ಅಥವಾ ಸಂಪೂರ್ಣವಾಗಿ ಸಗಟು ವಿದ್ಯುತ್ ಖರೀದಿಸುವ ಹೆಚ್‌ಆರ್‌ಇಸಿಎಸ್ ಮತ್ತು ಭಾವಿತ ಲೈಸೆನ್ಸ್‌ದಾರನು (ರು), ಅಂಥ ಎಸ್ಕಾಂ(ಗಳು) ಆರ್‌ಪಿಓ ಅನ್ನು ಪಾಲಿಸದೆ ಇದ್ದಲ್ಲಿ, ಅಂಥ ಎಸ್ಕಾಂನಿಂದ(ಗಳಿಂದ) ಮಾಡುವ ಅಂಥ ವಿದ್ಯುಚ್ಛಕ್ತಿ ಖರೀದಿಯ ಮಟ್ಟಿಗೆ ಆರ್‌ಪಿಓ ಅನ್ನು ಪಾಲಿಸಲಾಗಿರುವುದಿಲ್ಲವೆಂದು ಭಾವಿಸತಕ್ಕದ್ದು. ಅಂಥ ಪ್ರಕರಣಗಳಲ್ಲಿ, ಆರ್‌ಪಿಓ ಅನ್ನು ಪೂರೈಸುವ ಜವಾಬ್ದಾರಿಯು ಸಂದರ್ಭಾನುಸಾರ, ಹೆಚ್‌ಆರ್‌ಇಸಿಎಸ್ ಅಥವಾ ಅಂಥ ಭಾವಿತ ಲೈಸೆನ್ಸ್‌ದಾರನ (ರ)ದ್ದಾಗಿರತಕ್ಕದ್ದು.<br><br>ಮತ್ತೂ ಅಲ್ಲದೇ, ಒಂದು ವರ್ಷದಲ್ಲಿ ನಿರ್ದಿಷ್ಟಪಡಿಸಿದ ಸೌರವಿದ್ಯುತ್ ಆರ್‌ಪಿಓ ಮೀರಿ ಖರೀದಿಸಿದ ಹೆಚ್ಚುವರಿ ಸೌರ ವಿದ್ಯುಚ್ಛಕ್ತಿಯನ್ನು, ಆ ವರ್ಷದ ಸೌರವಿದ್ಯುಚ್ಛಕ್ತಿಯೇತರ ಆರ್‌ಪಿಓನಲ್ಲಿ ಏನಾದರೂ ಕೊರತೆಯಿದ್ದ ಪಕ್ಷದಲ್ಲಿ, ಆ ಕೊರತೆಗೆ ಪ್ರತಿಯಾಗಿ ಹೊಂದಾಣಿಕೆ ಮಾಡಿಕೊಳ್ಳಲು ಅನುಮತಿಸತಕ್ಕದ್ದು. | ಲೈಸೆನ್ಸ್‌ದಾರನಿಗೆ (ರಿಗೆ) ತ್ರೈಮಾಸಿಕ ಆರ್‌ಪಿಓ ಅನುಸರಣಾ ವರದಿಯ ಪ್ರತಿಯನ್ನು ಸಲ್ಲಿಸತಕ್ಕದ್ದು.<br><br>ಮತ್ತೂ ಪರಂತು, ಎಸ್ಕಾಂನಿಂದ(ಗಳಿಂದ) ಭಾಗಶ: ಅಥವಾ ಸಂಪೂರ್ಣವಾಗಿ ಸಗಟು ವಿದ್ಯುತ್ ಖರೀದಿಸುವ ಹೆಚ್‌ಆರ್‌ಇಸಿಎಸ್ ಮತ್ತು ಭಾವಿತ ಲೈಸೆನ್ಸ್‌ದಾರನು (ರು), ಅಂಥ ಎಸ್ಕಾಂ(ಗಳು) ಆರ್‌ಪಿಓ ಅನ್ನು ಪಾಲಿಸದೆ ಇದ್ದಲ್ಲಿ, ಅಂಥ ಎಸ್ಕಾಂನಿಂದ(ಗಳಿಂದ) ಮಾಡುವ ಅಂಥ ವಿದ್ಯುಚ್ಛಕ್ತಿ ಖರೀದಿಯ ಮಟ್ಟಿಗೆ ಆರ್‌ಪಿಓ ಅನ್ನು ಪಾಲಿಸಲಾಗಿರುವುದಿಲ್ಲವೆಂದು ಭಾವಿಸತಕ್ಕದ್ದು. ಅಂಥ ಪ್ರಕರಣಗಳಲ್ಲಿ, ಆರ್‌ಪಿಓ ಅನ್ನು ಪೂರೈಸುವ ಜವಾಬ್ದಾರಿಯು ಸಂದರ್ಭಾನುಸಾರ, ಹೆಚ್‌ಆರ್‌ಇಸಿಎಸ್ ಅಥವಾ ಅಂಥ ಭಾವಿತ ಲೈಸೆನ್ಸ್‌ದಾರನ (ರ)ದ್ದಾಗಿರತಕ್ಕದ್ದು.<br><br>ಮತ್ತೂ ಅಲ್ಲದೇ, ಯಾವುದೇ ವರ್ಷದಲ್ಲಿ ನಿರ್ದಿಷ್ಟಪಡಿಸಿದ ಸೌರವಿದ್ಯುತ್ ಆರ್‌ಪಿಓ ಮೀರಿ ಖರೀದಿಸಿದ ಹೆಚ್ಚುವರಿ ಸೌರ ವಿದ್ಯುಚ್ಛಕ್ತಿಯನ್ನು, ಆ ವರ್ಷದ ಸೌರವಿದ್ಯುಚ್ಛಕ್ತಿಯೇತರ ಆರ್‌ಪಿಓನಲ್ಲಿ ಏನಾದರೂ ಕೊರತೆಯಿದ್ದ ಪಕ್ಷದಲ್ಲಿ, ಆ ಕೊರತೆಗೆ ಪ್ರತಿಯಾಗಿ ಹೊಂದಾಣಿಕೆ ಮಾಡಿಕೊಳ್ಳಲು ಅನುಮತಿಸತಕ್ಕದ್ದು.<br><br>ಮತ್ತೂ ಅಲ್ಲದೆ, ಗೊತ್ತುಪಡಿಸಿದ ಸಮಯದೊಳಗೆ, 2017-18ನೇ ಸಾಲಿಗೆ ನಿರ್ದಿಷ್ಟಪಡಿಸಿದ ಸೌರವಿದ್ಯುತ್ ಆರ್‌ಪಿಓ ಅಥವಾ ಅದರ ಯಾವುದೇ ಭಾಗವನ್ನು ಸಾಧಿಸಲು ವಿಫಲನಾದ, ಆದರೆ ಶೇ.85ರಷ್ಟು ಮಟ್ಟಿಗೆ ಅಂಥ ಸೌರ ವಿದ್ಯುತ್ ಆರ್‌ಪಿಓನ ಅನುಪಾಲನೆಯನ್ನು ಸಾಧಿಸಿರುವ, ಯಾವುದೇ ವಿತರಣಾ ಲೈಸೆನ್ಸ್‌ದಾರನಿಗೆ, 2017-18ನೇ ಸಾಲಿಗೆ ನಿರ್ದಿಷ್ಟಪಡಿಸಿದ ಸೌರಶಕ್ತಿಯೇತರ ಆರ್‌ಪಿಓ ಮೀರಿ ಖರೀದಿಸಿದ ಹೆಚ್ಚುವರಿ ಸೌರಶಕ್ತಿಯೇತರ ವಿದ್ಯುತ್‌ನಿಂದ, ಸೌರ ವಿದ್ಯುತ್ ಆರ್‌ಪಿಓನಲ್ಲಿ ಉಂಟಾದ ಕೊರತೆಯನ್ನು ನೀಗಿಸಿಕೊಳ್ಳಲು ಅನುಮತಿ ನೀಡತಕ್ಕದ್ದು. |
| 4 (ii) ಮೇಲ್ಕಂಡ 3 (ii) ರಲ್ಲಿ ಪ್ರತಿಯೊಬ್ಬ ಗ್ರಿಡ್‌ಗೆ ಜೋಡಣೆಯಾದ ಕ್ಯಾಪ್ಟೀವ್ ಗ್ರಾಹಕನು, ಯಾವುದೇ ಆರ್ಥಿಕ ವರ್ಷದಲ್ಲಿ, ಕ್ಯಾಪ್ಟೀವ್ ಮೂಲಗಳಿಂದ ಮಾಡಿಕೊಳ್ಳುವ ತನ್ನ ವಿದ್ಯುತ್ತಿನ ಬಳಕೆಯ ಪ್ರಮಾಣದಲ್ಲಿ, ಕನಿಷ್ಠ ಈ ಕೆಳಗೆ ನಿರ್ದಿಷ್ಟಪಡಿಸಲಾದಂತೆ, | 4 (ii) ಮೇಲ್ಕಂಡ 3 (ii) ರಲ್ಲಿ ಪ್ರತಿಯೊಬ್ಬ ಗ್ರಿಡ್‌ಗೆ ಜೋಡಣೆಯಾದ ಕ್ಯಾಪ್ಟೀವ್ ಗ್ರಾಹಕನು, ಯಾವುದೇ ಆರ್ಥಿಕ ವರ್ಷದಲ್ಲಿ, ಕ್ಯಾಪ್ಟೀವ್ ಮೂಲಗಳಿಂದ ಮಾಡಿಕೊಳ್ಳುವ ತನ್ನ ವಿದ್ಯುತ್ತಿನ ಬಳಕೆಯ ಪ್ರಮಾಣದಲ್ಲಿ, ಕನಿಷ್ಠ ಈ ಕೆಳಗೆ ನಿರ್ದಿಷ್ಟಪಡಿಸಲಾದಂತೆ, |

ನವೀಕರಿಸಬಹುದಾದ ಇಂಧನ ಮೂಲಗಳ ವಿದ್ಯುತ್‌ನ್ನು ಖರೀದಿಸತಕ್ಕದ್ದು:

| ಮೂಲ | 2015-16 | 2016-17 | 2017-18 | 2018-19 | 2019-20 ಮತ್ತು ನಂತರ |
|---|---|---|---|---|---|
| ಸೌರಶಕ್ತಿಯೇತರ | 5.0% | 5.5% | 6% | 7.0% | 8% |
| ಸೌರಶಕ್ತಿ | 0% | 0.75% | 1.25% | 1.75% | 2.50% |

ಪರಂತು, ಏಕ ಕಾನೂನುಬದ್ಧ ಸಂಸ್ಥೆಯ ಘಟಕಗಳಾಗಿ, ಆದರೆ, ಕರ್ನಾಟಕ ರಾಜ್ಯದೊಳಗೆ ಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿರುವ ಗ್ರಾಹಕರ ಪ್ರಕರಣದಲ್ಲಿ, ಕರ್ನಾಟಕ ರಾಜ್ಯದೊಳಗಿನ ಅಂಥ ಎಲ್ಲಾ ಘಟಕಗಳ ಒಟ್ಟುಗೂಡಿಸಿದ ಆರ್‌ಪಿಓ ಅನ್ನು, ಮೇಲೆ ನಿರ್ದಿಷ್ಟಪಡಿಸಲಾದ ಆರ್‌ಪಿಓ ಅನ್ನು ಪೂರೈಸುವ ಉದ್ದೇಶಕ್ಕಾಗಿ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

ನವೀಕರಿಸಬಹುದಾದ ಇಂಧನ ಮೂಲಗಳ ವಿದ್ಯುತ್‌ನ್ನು ಖರೀದಿಸತಕ್ಕದ್ದು:

| ಮೂಲ | 2015-16 | 2016-17 | 2017-18 | 2018-19 | 2019-20 ಮತ್ತು ನಂತರ |
|---|---|---|---|---|---|
| ಸೌರಶಕ್ತಿಯೇತರ | 5.0% | 5.5% | 6% | 7.0% | ಇನ್ನಷ್ಟೇ ನಿರ್ಧರಿಸಬೇಕಾಗಿದೆ |
| ಸೌರಶಕ್ತಿ | 0% | 0.75% | 2.75% | 6.00% | |

ಪರಂತು, ಏಕ ಕಾನೂನುಬದ್ಧ ಸಂಸ್ಥೆಯ ಘಟಕಗಳಾಗಿ, ಆದರೆ, ಕರ್ನಾಟಕ ರಾಜ್ಯದೊಳಗೆ ಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿರುವ ಗ್ರಾಹಕರ ಪ್ರಕರಣದಲ್ಲಿ, ಕರ್ನಾಟಕ ರಾಜ್ಯದೊಳಗಿನ ಅಂಥ ಎಲ್ಲಾ ಘಟಕಗಳ ಒಟ್ಟುಗೂಡಿಸಿದ ಆರ್‌ಪಿಓ ಅನ್ನು, ಮೇಲೆ ನಿರ್ದಿಷ್ಟಪಡಿಸಲಾದ ಆರ್‌ಪಿಓ ಅನ್ನು ಪೂರೈಸುವ ಉದ್ದೇಶಕ್ಕಾಗಿ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

ಮತ್ತೂ ಪರಂತು, ಯಾವುದೇ ವರ್ಷಕ್ಕೆ ನಿರ್ದಿಷ್ಟಪಡಿಸಿದ ಸೌರವಿದ್ಯುತ್ ಆರ್‌ಪಿಓ ಮೀರಿ ಖರೀದಿಸಿದ ಹೆಚ್ಚುವರಿ ಸೌರಶಕ್ತಿ ವಿದ್ಯುಚ್ಛಕ್ತಿಯನ್ನು, ಆ ವರ್ಷದ ಸೌರ ವಿದ್ಯುಚ್ಛಕ್ತಿಯೇತರ ಆರ್‌ಪಿಓನಲ್ಲಿ ಏನಾದರೂ ಕೊರತೆಯಿದ್ದ ಪಕ್ಷದಲ್ಲಿ, ಆ ಕೊರತೆಗೆ ಪ್ರತಿಯಾಗಿ ಹೊಂದಾಣಿಕೆ ಮಾಡಿಕೊಳ್ಳಲು ಅನುಮತಿಸತಕ್ಕದ್ದು.

ಮತ್ತೂ ಅಲ್ಲದೆ, ಗೊತ್ತುಪಡಿಸಲಾದ ಸಮಯದೊಳಗೆ, 2017-18ನೇ ಸಾಲಿಗೆ ನಿರ್ದಿಷ್ಟಪಡಿಸಿದ ಸೌರ ವಿದ್ಯುತ್ ಆರ್‌ಪಿಓ ಅಥವಾ ಅದರ ಯಾವುದೇ ಭಾಗವನ್ನು ಸಾಧಿಸಲು ವಿಫಲನಾದ, ಆದರೆ ಶೇ. 85ರಷ್ಟು ಮಟ್ಟಿಗೆ ಅಂಥ ಸೌರ ವಿದ್ಯುತ್ ಆರ್‌ಪಿಓನ ಅನುಪಾಲನೆಯನ್ನು ಸಾಧಿಸಿರುವ ಯಾವುದೇ ಗ್ರಿಡ್ ಸಂಬಂಧಿತ ಕ್ಯಾಪ್ಟೀವ್ ಗ್ರಾಹಕನಿಗೆ, 2017-18ನೇ ಸಾಲಿನ ನಿರ್ದಿಷ್ಟಪಡಿಸಿದ ಸೌರಶಕ್ತಿಯೇತರ ಆರ್‌ಪಿಓ ಮೀರಿ ಖರೀದಿಸಿದ ಹೆಚ್ಚುವರಿ ಸೌರಶಕ್ತಿಯೇತರ ಇಂಧನದಿಂದ ಉಂಟಾದ ಕೊರತೆಯನ್ನು ನೀಗಿಸಿಕೊಳ್ಳಲು ಅನುಮತಿಸತಕ್ಕದ್ದು.

4 (iii) ಮೇಲ್ಕಂಡ 3 (ii) ರಲ್ಲಿ ಹೇಳಲಾದ ಪ್ರತಿಯೊಬ್ಬ ಮುಕ್ತ ಅವಕಾಶ ಗ್ರಾಹಕನು, ಯಾವುದೇ ಆರ್ಥಿಕ ವರ್ಷದಲ್ಲಿ, ಮುಕ್ತ ಅವಕಾಶದ ಮೂಲಕ ಮಾಡಿಕೊಳ್ಳುವ ತನ್ನ ವಿದ್ಯುತ್ ಬಳಕೆಯ ಪ್ರಮಾಣದಲ್ಲಿ, ಕನಿಷ್ಠ ಈ ಕೆಳಗೆ ನಿರ್ದಿಷ್ಟಪಡಿಸಲಾದಂತೆ, ನವೀಕರಿಸಬಹುದಾದ ಇಂಧನ ಮೂಲಗಳಿಂದ ಖರೀದಿಸತಕ್ಕದ್ದು.

4 (iii) ಮೇಲ್ಕಂಡ 3 (ii) ರಲ್ಲಿ ಹೇಳಲಾದ ಪ್ರತಿಯೊಬ್ಬ ಮುಕ್ತ ಅವಕಾಶ ಗ್ರಾಹಕನು, ಯಾವುದೇ ಆರ್ಥಿಕ ವರ್ಷದಲ್ಲಿ, ಮುಕ್ತ ಅವಕಾಶದ ಮೂಲಕ ಮಾಡಿಕೊಳ್ಳುವ ತನ್ನ ವಿದ್ಯುತ್ ಬಳಕೆಯ ಪ್ರಮಾಣದಲ್ಲಿ, ಕನಿಷ್ಠ ಈ ಕೆಳಗೆ ನಿರ್ದಿಷ್ಟಪಡಿಸಲಾದಂತೆ, ನವೀಕರಿಸಬಹುದಾದ ಇಂಧನ ಮೂಲಗಳಿಂದ ಖರೀದಿಸತಕ್ಕದ್ದು.

| ಮೂಲ | 2015-16 | 2016-17 | 2017-18 | 2018-19 | 2019-20 ಮತ್ತು ನಂತರ |
| --- | --- | --- | --- | --- | --- |
| ಸೌರಶಕ್ತಿಯೇತರ | 5.0% | 5.5% | 6% | 7.0% | 8% |
| ಸೌರಶಕ್ತಿ | 0% | 0.75% | 1.25% | 1.75% | 2.50% |

ಪರಂತು, ಏಕ ಕಾನೂನುಬದ್ಧ ಸಂಸ್ಥೆಯ ಘಟಕಗಳಾಗಿ, ಆದರೆ, ಕರ್ನಾಟಕ ರಾಜ್ಯದೊಳಗೆ ಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿರುವ ಗ್ರಾಹಕರ ಪ್ರಕರಣದಲ್ಲಿ, ಕರ್ನಾಟಕ ರಾಜ್ಯದೊಳಗಿನ ಅಂಥ ಎಲ್ಲಾ ಘಟಕಗಳ ಒಟ್ಟುಗೂಡಿಸಿದ ಆರ್‌ಪಿಒ ಅನ್ನು, ಮೇಲೆ ನಿರ್ದಿಷ್ಟಪಡಿಸಲಾದ ಆರ್‌ಪಿಒ ಅನ್ನು ಪೂರೈಸುವ ಉದ್ದೇಶಕ್ಕಾಗಿ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

| ಮೂಲ | 2015-16 | 2016-17 | 2017-18 | 2018-19 | 2019-20 ಮತ್ತು ನಂತರ |
| --- | --- | --- | --- | --- | --- |
| ಸೌರಶಕ್ತಿಯೇತರ | 5.0% | 5.5% | 6% | 7.0% | ಇನ್ನೂ ನಿರ್ಧರಿಸಬೇಕಾಗಿದೆ |
| ಸೌರಶಕ್ತಿ | 0% | 0.75% | 2.75% | 6.00% | |

ಪರಂತು, ಏಕ ಕಾನೂನುಬದ್ಧ ಸಂಸ್ಥೆಯ ಘಟಕಗಳಾಗಿ; ಆದರೆ, ಕರ್ನಾಟಕ ರಾಜ್ಯದೊಳಗೆ ಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿರುವ ಗ್ರಾಹಕರ ಪ್ರಕರಣದಲ್ಲಿ, ಕರ್ನಾಟಕ ರಾಜ್ಯದೊಳಗಿನ ಅಂಥ ಎಲ್ಲಾ ಘಟಕಗಳ ಒಟ್ಟುಗೂಡಿಸಿದ ಆರ್‌ಪಿಒ ಅನ್ನು, ಮೇಲೆ ನಿರ್ದಿಷ್ಟಪಡಿಸಲಾದ ಆರ್‌ಪಿಒ ಅನ್ನು ಪೂರೈಸುವ ಉದ್ದೇಶಕ್ಕಾಗಿ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು.

ಮತ್ತೂ ಅಲ್ಲದೆ, ಯಾವುದೇ ವರ್ಷಕ್ಕೆ ನಿರ್ದಿಷ್ಟಪಡಿಸಿದ ಸೌರವಿದ್ಯುತ್ ಆರ್‌ಪಿಒ ಮೀರಿ ಖರೀದಿಸಿದ ಹೆಚ್ಚುವರಿ ಸೌರಶಕ್ತಿ ವಿದ್ಯುಚ್ಛಕ್ತಿಯನ್ನು, ಆ ವರ್ಷದ ಸೌರ ವಿದ್ಯುಚ್ಛಕ್ತಿಯೇತರ ಆರ್‌ಪಿಒನಲ್ಲಿ ಏನಾದರೂ ಕೊರತೆಯಿದ್ದ ಪಕ್ಷದಲ್ಲಿ, ಆ ಕೊರತೆಗೆ ಪ್ರತಿಯಾಗಿ ಹೊಂದಾಣಿಕೆ ಮಾಡಿಕೊಳ್ಳಲು ಅನುಮತಿಸತಕ್ಕದ್ದು.

ಮತ್ತೂ ಅಲ್ಲದೆ, ಗೊತ್ತುಪಡಿಸಲಾದ ಸಮಯದೊಳಗೆ, 2017-18ನೇ ಸಾಲಿಗೆ ನಿರ್ದಿಷ್ಟಪಡಿಸಿದ ಸೌರ ವಿದ್ಯುತ್ ಆರ್‌ಪಿಒ ಅಥವಾ ಅದರ ಯಾವುದೇ ಭಾಗವನ್ನು ಸಾಧಿಸಲು ವಿಫಲನಾದ, ಆದರೆ ಶೇ 85ರಷ್ಟು ಮಟ್ಟಿಗೆ ಅಂಥ ಸೌರ ವಿದ್ಯುತ್ ಆರ್‌ಪಿಒನ ಅನುಪಾಲನೆಯನ್ನು ಸಾಧಿಸಿರುವ ಯಾವುದೇ ಮುಕ್ತ ಅವಕಾಶ ಗ್ರಾಹಕನಿಗೆ, 2017-18ನೇ ಸಾಲಿನ ನಿರ್ದಿಷ್ಟಪಡಿಸಿದ ಸೌರಶಕ್ತಿಯೇತರ ಆರ್‌ಪಿಒ ಮೀರಿ ಖರೀದಿಸಿದ ಹೆಚ್ಚುವರಿ ಸೌರಶಕ್ತಿಯೇತರ ವಿದ್ಯುತ್‌ನಿಂದ, ಸೌರ ವಿದ್ಯುತ್ ಆರ್‌ಪಿಒನಲ್ಲಿ ಉಂಟಾದ ಕೊರತೆಯನ್ನು ನೀಗಿಸಿಕೊಳ್ಳಲು ಅನುಮತಿಸತಕ್ಕದ್ದು.

ಆಯೋಗದಿಂದ ಅನುಮೋದನ ಮೇರೆಗೆ

ಸಹಿ/-
ಕಾರ್ಯದರ್ಶಿ